ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE :

### ಪರಿಷತ್ ಕಾರ್ಯದರ್ಶಿಗೆ ಉತ್ತರಿಸಲು ಸಭಾಪತಿಯಿಂದ 48 ಗಂಟೆ ಗಡುವು

# ಅಧಿಕಾರಿಗಳತ್ತ ಅವಿಶ್ವಾಸ ಸಂಘರ್ಷ

■ **ವಿಕ ಸುದ್ದಿಲೋಕ** ಬೆಂಗಳೂರು 19/12/20

ಸಭಾಪತಿಯ ಮೇಲಿನ ಅವಿಶ್ವಾಸ ಪ್ರಕರಣದ ಹಿನ್ನೆಲೆಯಲ್ಲಿ ಪರಿಷತ್ತಿನ ಕಲಾಪದೊಳಗೆ ನಡೆದ ಗದ್ದಲ, ತಳ್ಳಾಟದ ಸಂಘರ್ಷವು ಈಗ ಪರಿಷತ್ ಅಧಿಕಾರಿಗಳ ಕಡೆಗೆ ತಿರುಗಿದೆ.

ಮಂಗಳವಾರ ನಡೆದ ಘಟನಾವಳಿಗಳ ಸಂಬಂಧ ಆಡಳಿತ-ಪ್ರತಿಪಕ್ಷಗಳ ನಡುವೆ ಪತ್ರ ಸಮರಕ್ಕೆ ರಾಜಭವನದ ಪ್ರತಿಕ್ರಿಯೆ ಹೊರ ಬೀಳುವ ಮುನ್ನವೇ ಕರ್ತವ್ಯ ನಿರ್ಲಕ್ಷ್ಯದ ಆರೋಪದಡಿ ಪರಿಷತ್ ಕಾರ್ಯದರ್ಶಿಯವರಿಗೆ ಸಭಾಪತಿ ಪ್ರತಾಪ ಚಂದ್ರ ಶೆಟ್ಟಿ ಅವರು ನೋಟಿಸ್ ಜಾರಿಗೊಳಿಸಿ, ಉತ್ತರಿಸಲು 48 ಗಂಟೆ ಗಡುವು ನೀಡಿದ್ದಾರೆ.

'ಅಂದಿನ ಕಾರ್ಯಕಲಾಪದ ವೇಳೆ ನಿಮ್ಮ ವರ್ತನೆಯು ವಿಧಾನಮಂಡಲದ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿತ್ತು. ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ನಿಯಮ ಬಾಹಿರವಾಗಿ, ಬೇಜವಾಬ್ದಾರಿ ಮತ್ತು ಕರ್ತವ್ಯ ನಿರ್ಲಕ್ಷ್ಯತನದ ನಡವಳಿಕೆ ಮತ್ತು ಅಧಿಕಾರ ವ್ಯಾಪ್ತಿ ಮೀರಿದ ತಮ್ಮ ಕಾರ್ಯನಿರ್ವಹಣೆಯ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ ರೀತಿ ಕ್ರಮ ಕೈಗೊಳ್ಳಬಾರದೇಕೇ? ಎಂಬುದರ ಬಗ್ಗೆ ವಿವರಣೆಯನ್ನು ಅಗತ್ಯ ದಾಖಲೆಗಳೊಂದಿಗೆ ಕಡತದಲ್ಲಿ ಮಂಡಿಸಬೇಕು' ಎಂದು ಗುರುವಾರವೇ ಆದೇಶಿಸಿದ್ದಾರೆ.

**ಕಾರ್ಯದರ್ಶಿಗೆ ಬರೆದ ಪತ್ರದ ಸಾರ**

- ಸಭಾಪತಿ ಬೊಟ್ಟು ಕೇವಲ ಆಡಳಿತಪಕ್ಷದ ಕಡೆಗೆ
- ಉಪಸಭಾಪತಿಗೆ ಸರಿಯಾಗಿ ಮಾಹಿತಿ ನೀಡಿಲ್ಲ
- ಕಲಾಪದಲ್ಲಿನ ವ್ಯತಿರಿಕ್ತ ಘಟನೆಗೆ ನೀವೇ ಸಾಕ್ಷಿ
- ಸಭಾಪತಿ ಪೀಠದಲ್ಲಿ ಕುಳಿತವರ ಪ್ರಸ್ತಾಪವಿಲ್ಲ



**ವರದಿಗೆ ಸೂಚನೆ**

ಡಿ.15 ರಂದು ಬೆಳಗ್ಗೆ ಸದನದಲ್ಲಿ ನಡೆದ ಅಹಿತಕರ ಘಟನೆ ಸಂಬಂಧ ಆಡಳಿತ ಪಕ್ಷದ ಸದಸ್ಯರು ಸಭಾಪತಿಯಾದ ನನ್ನ ಸದನ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವುದು ಸೇರಿದಂತೆ ಸದನದ ಕಾರ್ಯ ಕಲಾಪಗಳಿಗೆ ವ್ಯತಿರಿಕ್ತವಾಗಿ ನಿಯಮಾವಳಿಗಳನ್ನು ಗಾಳಿಗೆ ತೂರಿ ನಡೆದುಕೊಂಡ ಘಟನೆಗಳು ವಿವಿಧ ಸಮೂಹ ಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ವ್ಯಾಪಕವಾಗಿ ಟೀಕೆಗೆ ಒಳಗಾಗಿದೆ. ಇದರಿಂದ ಶತಮಾನದ ಇತಿಹಾಸವುಳ್ಳ ವಿಧಾನ ಪರಿಷತ್ತಿನ ಗೌರವ, ಸಂಪ್ರದಾಯ ಹಾಗೂ ಪರಂಪರೆಗೆ ಅಂದಿನ ಘಟನೆಗಳಿಂದ ಧಕ್ಕೆಯಾಗಿದ್ದೆ. ಸದನದ ಮುಖ್ಯಸ್ಥನಾಗಿ ಸಾರ್ವಜನಿಕ ಚರ್ಚೆ, ಅಭಿಪ್ರಾಯ ಪತ್ರಿಕಾ ಸಂಪಾದಕೀಯಗಳು ಹಿಂದಿನ ಸಭಾಪತಿಯವರ ಹೇಳಿಕೆಗಳು ಇತ್ಯಾದಿಗಳು ಒಟ್ಟು ತಾತ್ಪರ್ಯಕ್ಕೆ ಘಟನೆಯ ನೈಜ ವಿವರಣೆ ನೀಡಲು ಪೂರಕವಾಗುವಂತೆ ಸದನದಲ್ಲಿ ಪ್ರತ್ಯಕ್ಷದರ್ಶಿಯಾಗಿ ಉಪಸ್ಥಿತರಿದ್ದ ತಾವು ಸದನದ ಆರಂಭದಿಂದ ನಾನು ಆಗಮಿಸಿ ಸದನ ಮುಂದೂಡುವವರೆಗೆ ನನ್ನ ಅನುಪಸ್ಥಿತಿಯಲ್ಲಿ ಹಾಗೂ ನನ್ನ ನಿರ್ಗಮನದ ನಂತರ ನಡೆದ ಘಟನೆಗಳ ಸಂಕ್ಷಿಪ್ತ ವರದಿ ಸಲ್ಲಿಸುವಂತೆಯೂ ಸೂಚಿಸಿದ್ದಾರೆ.

ಈ ಮಧ್ಯೆ ಆ ದಿನ ಪರಿಷತ್ ಸಚಿವಾಲಯದ ಜಾಲತಾಣದಲ್ಲಿ ಪ್ರಕಟಿಸಿರುವ ದೃಶ್ಯ ಮಾಲಿಕೆಗಳನ್ನು ವೀಕ್ಷಿಸಿದಾಗ ಸದನದ ಕಾರ್ಯಕಲಾಪಗಳ ಸಂಪೂರ್ಣ ಆಡಳಿತ ಜವಾಬ್ದಾರಿ ವಹಿಸಿದ್ದ ತಾವು ಕೋರಂ ಬೆಲ್ ಚಾಲನೆಯಲ್ಲಿದ್ದಾಗ್ಯೂ ನಿಯಮ ಬಾಹಿರವಾಗಿ ಉಪಸಭಾಪತಿಯವರು ಪೀಠ ಅಲಂಕರಿಸಿರುವುದು, ಸಭಾಪತಿಯವರು ಸದನ ಪ್ರವೇಶಿಸುವ ದ್ವಾರವನ್ನು ಮುಚ್ಚಿ ನ… ಪ್ರವೇಶಕ್ಕೆ ನಿರ್ಬಂಧಿಸಿರುವುದು. ನಿಯಮ ಬಾಹಿರವಾಗಿ ಪೀಠ ಅಲಂಕರಿಸಿದ್ದ ಉ… ಸಭಾಪತಿಯವರಿಗೆ ಸರಿಯಾಗಿ ಮಾಹಿ… ನೀಡದೆ ಸದನ ಮುಂದುವರಿಸುವ ಚಿತಾವ… ರೀತಿ ತಾವು ದಾಖಲೆಗಳನ್ನು ಒದಗಿಸಿರುವು… ಸೇರಿದಂತೆ ತಮ್ಮ ಕರ್ತವ್ಯ ನಿರ್ಲಕ್ಷ್ಯತ… ಸಾಕ್ಷಿಯಾಗಿರುವ ಹಲವು ಅಂಶಗಳ… ಗಮನಿಸಿರುತ್ತೇನೆ ಎಂದು ನೋಟಿಸ್‌ನ… ತಿಳಿಸಿದ್ದಾರೆ.